**ಓ.ಎಸ್. ಸಂಖ್ಯೆಃ 219/2022**

**ಡಿ.ಡಬ್ಲ್ಯೂಃ 1**

ದಿನಾಂಕಃ 04.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಯ ಪರ ಶ್ರೀ ವಿ ಬಿ ಪಿ ವಕೀಲರಿಂದ**

1. ನನ್ನ ಅಜ್ಜನಿಗೆ ನಾಗ ನಾಯ್ಕ ಎಂದು ಹಾಗೂ ಸಣ್ಣ ನಾಗ ನಾಯ್ಕ ಎಂದು ಕರೆಯುತ್ತಿದ್ದರು ಎಂದರೆ ಸರಿ. ಸದರಿ ಎರಡು ಹೆಸರು ಒಬ್ಬ ವ್ಯಕ್ತಿಯ ಹೆಸರು ಎಂದರೆ ಸರಿ. ನನ್ನ ಅಜ್ಜನ ತಂದೆಯ ಹೆಸರು ಬೈಲೂರು ಬಸ್ಯ ನಾಯ್ಕ ಎಂದರೆ ಸರಿ. ನನ್ನ ಅಜ್ಜ ನಾಗ ನಾಯ್ಕ ರವರಿಗೆ ತಂಗಿಯರು ಹಾಗೂ ತಮ್ಮಂದಿರು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸಣ್ಣ ನಾಗ ನಾಯ್ಕ ರವರಿಗೆ ಎಷ್ಟು ಭೂಮಿ ಇತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಈಗ ಸಣ್ಣ ನಾಗ ನಾಯ್ಕ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿ ಬಸಾಪೂರ ಗ್ರಾಮದಲ್ಲಿ ಇದೆ ಎಂದರೆ ಸರಿ. ಸದರಿ ಸಣ್ಣ ನಾಗ ನಾಯ್ಕ ರವರಿಗೆ ಸರ್ವೆ ನಂ 542 ಎ, 542 ಜೆಡ್, 544 ಎ ರಲ್ಲಿ ಒಟ್ಟು 26 ಎಕರೆ 10 ಸೆಂಟ್ಸ ಜಮೀನು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ಸಣ್ಣ ನಾಗ ನಾಯ್ಕ ರವರು ಕೊಳ್ಳಿ ಮಾರೆಪ್ಪನ ಮಗ ಈರಣ್ಣ ರವರಿಗೆ ದಾನ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳನ್ನು ನನ್ನ ಅಜ್ಜ ಈರಣ್ಣನವರಿಗೆ 1971 ರಲ್ಲಿ ದಾನ ಕೊಟ್ಟಿದಾನೆ ಎಂದರೆ ಗೊತ್ತಿಲ್ಲ. ನಾಗ ನಾಯ್ಕ ರವರಿಗೆ ಒಬ್ಬಳು ಹೆಣ್ಣು ಮಗಳು ಇದ್ದಳು. ಆಕೆಯ ಹೆಸರು ಸುಂಕಮ್ಮ. ಮೇಲೆ ಹೇಳಿದ ಕೊಳ್ಳಿ ಈರಣ್ಣ ಸುಂಕಮ್ಮ ನ ಮಗ ಎಂದರೆ ನನಗೆ ಗೊತ್ತಿಲ್ಲ. ನನ್ನ ಜೊತೆ ಸದರಿ ಈರಣ್ಣ ಹಲವಾರು ಬಾರಿ ನ್ಯಾಯಾಲಯಕ್ಕೆ ಬಂದಿದ್ದಾನೆ ಎಂದರೆ ಸರಿ. ಈ ದಿನ ಅವರು ನನ್ನ ಜೊತೆ ಬಂದಿಲ್ಲ. ಸರ್ವೆ ನಂ 542 ಎ, 542 ಜೆಡ್, 544 ಎ ರಲ್ಲಿನ ಜಮೀನು ಈರಣ್ಣ ನವರ ಹೆಸರಿನಲ್ಲಿ ಇವೆ ಎಂದರೆ ಗೊತ್ತಿಲ್ಲ.

2. ಮೇಲೆ ಹೇಳಿದ ಜಮೀನು ಹಾಗೂ ದಾವಾ ಆಸ್ತಿಯನ್ನು ನನ್ನ ಅಜ್ಜ ಕೊಳ್ಳಿ ಈರಣ್ಣನಿಗೆ ದಾನ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ದಾನ ಕೊಡುವಾಗ ಕೊಳ್ಳಿ ಈರಣ್ಣ ಅಪ್ರಾಪ್ತ ವಯಸ್ಸಿನವನಾಗಿದ್ದರಿಂದ ಅವರ ತಂದೆ ಮೈನರ್ ಗಾರ್ಡಿಯನ್ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಕೇವಲ ದಾವಾ ಆಸ್ತಿ ಮಾತ್ರ ಹಕ್ಕು ಬದಲಾವಣೆ ಅಗದೆ ನನ್ನ ಅಜ್ಜ ನಾಗ ನಾಯ್ಕ ಹೆಸರಿನಲ್ಲಿ ದಾಖಲೆಗಳು ಮುಂದುವರೆದವು ಎಂದರೆ ಸರಿ. ಕೊಳ್ಳಿ ಈರಣ್ಣ ನನಗೆ ಅಳಿಯ ಆಗಬೇಕು. ಸದರಿ ಕೊಳ್ಳಿ ಈರಣ್ಣ ದಾವಾ ಆಸ್ತಿಯನ್ನು 1979 ರಲ್ಲಿ ವಾದಿಗೆ ಮಾರಾಟ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ವಾದಿ ದಾವಾ ಆಸ್ತಿಯನ್ನು ತನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಅರ್ಜಿ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನಾನು ಅರ್ಜಿಯನ್ನು ಕೊಟ್ಟಿದ್ದೆನೆ. ಸದರಿ ಅರ್ಜಿಗೆ ವಾದಿ ತಕರಾರು ಸಲ್ಲಿಸಿದರು ಎಂದರೆ ಸರಿ. ದಾವಾ ಆಸ್ತಿ ವಾದಿಯ

ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾನು ಕಂದಾಯ ಪಾವತಿ ಮಾಡಿದ್ದೇನೆ. ಸದರಿ ದಾಖಲೆಗಳನ್ನು ಹಾಜರುಪಡಿಸಿಲ್ಲ.

3. ಸಾಮಾನ್ಯವಾಗಿ ಗ್ರಾಮಗಳಲ್ಲಿ ಹೆಸರಿನ ಮೊದಲು ಸಣ್ಣ, ಚಿಕ್ಕ, ದೊಡ್ಡ, ಪೆದ್ದ ಹಾಗೂ ಚಿನ್ನ ಎಂಬ ಪದಗಳನ್ನು ಸೇರಿಸುತ್ತಾರೆ ಎಂದರೆ ಸರಿ. ಹೆಸರಿನ ನಂತರ ಅಣ್ಣ, ಅಪ್ಪ, ಅಯ್ಯ ಎಂದು ಸೇರಿಸುತ್ತಾರೆ ಎಂದರೆ ಸರಿ. ದಾವಾ ಆಸ್ತಿಗೆ ವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿಃ 29 ವಂಶವೃಕ್ಷದಲ್ಲಿ ಸುಂಕಮ್ಮರವರ ಹೆಸರು ಇಲ್ಲ ಎಂದರೆ ಸರಿ. ನಿಡಿಃ 29 ರಲ್ಲಿ ನಮಗೆ ಸಂಬಂಧ ಇಲ್ಲದವರ ಹೆಸರನ್ನು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ವಂಶವೃಕ್ಷ ದೃಡೀಕರಣ ಪತ್ರ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ವಾದಿ ದಾವಾ ಆಸ್ತಿಯ ಸಂಪೂರ್ಣ ಮಾಲೀಕರು ಎಂದರೆ ಸರಿಯಲ್ಲ. ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**